**ನಮೂನೆ –2ಎ**

(ನಿಯಮ 5ಇ(3) ಅನ್ನು ನೋಡಿ)

# ಚುನಾವಣಾ ನೋಟೀಸು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ನಿರ್ಮಲಾ ರಾಣಿ ಹೈ ಸ್ಕೂಲ್, 18ನೇ ಅಡ್ಡರಸ್ತೆ, 11ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ವೆಸ್ಟ್, ಬೆಂಗಳೂರು – 560055 ಇಲ್ಲಿ ದಿನಾಂಕ 24.07.2022 ರಂದು ಬೆಳಿಗ್ಗೆ 9.00 ಗಂಟೆಯಿಂದ ಸಾಯಂಕಾಲ 4.00 ಗಂಟೆಯವರೆಗೆ ನಡೆಸಲಾಗುವುದೆಂದು ನೋಟೀಸು ನೀಡಲಾಗಿದೆ. ಸದರಿ ಚುನಾವಣಾ ವೇಳಾಪಟ್ಟಿಯು ಈ ಕೆಳಗಿನಂತೆ ಇರತಕ್ಕದೆಂದೂ ನೋಟೀಸು ನೀಡಲಾಗಿದೆ.

| | | |
|---|---|---|
| – | ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಪಡೆಯಲು ಪ್ರಾರಂಭಿಸುವ ದಿನಾಂಕ | ದಿನಾಂಕ: 09.07.2022<br>ಸಮಯ: ಬೆಳಿಗ್ಗೆ 10.00 ಗಂಟೆಯಿಂದ |
| (ಎ) | ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಪಡೆಯಲು ಕೊನೆಯ ದಿನಾಂಕ (ನಿಯಮ 5ಇ) | ದಿನಾಂಕ: 16.07.2022<br>ಸಮಯ: ಸಂಜೆ 4.00 ಗಂಟೆಯವರೆಗೆ |
| (ಬಿ) | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ (ನಿಯಮ 5ಜಿ) | ದಿನಾಂಕ: 17.07.2022<br>ಸಮಯ: ಬೆಳಿಗ್ಗೆ 11.00 ಗಂಟೆಗೆ |
| (ಸಿ) | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 5ಐ) | ದಿನಾಂಕ: 17.07.2022 ರಂದು ನಾಮಪತ್ರಗಳ ಪರಿಶೀಲನೆ ನಂತರ |
| (ಡಿ) | ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರಗಳ ಹಿಂತೆಗೆತಕ್ಕೆ ಕೊನೆಯ ದಿನ. (ನಿಯಮ 5ಹೆಚ್) | ದಿನಾಂಕ: 18.07.2022<br>ಸಮಯ: ಸಂಜೆ 3.00 ಗಂಟೆಯವರೆಗೆ |
| (ಇ) | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 5ಐ) | ದಿನಾಂಕ: 18.07.2022<br>ಸಮಯ: ಸಂಜೆ 4.00 ಗಂಟೆಗೆ |
| (ಎಫ್) | ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳಿಗೆ ಚಿಹ್ನೆಗಳ ಹಂಚಿಕೆ (ನಿಯಮ 5ಜೆ) | ದಿನಾಂಕ: 18.07.2022<br>ಸಮಯ: ಸಂಜೆ 4.30 ಗಂಟೆಗೆ |
| (ಜಿ) | ಚಿಹ್ನೆಯ ಸಹಿತ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ (ನಿಯಮ 5ಜೆ) | ದಿನಾಂಕ: 20.07.2022<br>ಸಮಯ: ಬೆಳಿಗ್ಗೆ 11.00 ಗಂಟೆಗೆ |
| (ಹೆಚ್) | ಮತದಾನದ ಸ್ಥಳ, ದಿನಾಂಕ ಮತ್ತು ಸಮಯ | **ಸ್ಥಳ** : ನಿರ್ಮಲಾ ರಾಣಿ ಹೈ ಸ್ಕೂಲ್, 18ನೇ ಅಡ್ಡರಸ್ತೆ, 11ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ವೆಸ್ಟ್, ಬೆಂಗಳೂರು–560055<br>**ದಿನಾಂಕ:** 24.07.2022, ಭಾನುವಾರ<br>**ಸಮಯ:** ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ |

| | | |
|---|---|---|
| (ಐ) | ಮತ ಎಣಿಕೆಯ ಸ್ಥಳ, ದಿನಾಂಕ ಮತ್ತು ಸಮಯ | **ಮತ ಎಣಿಕೆಯ ಸ್ಥಳ :** ನಿರ್ಮಲಾ ರಾಣಿ ಹೈ ಸ್ಕೂಲ್, 18ನೇ ಅಡ್ಡರಸ್ತೆ, 11ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ವೆಸ್ಟ್, ಬೆಂಗಳೂರು – 560 055<br>**ಮತ ಎಣಿಕೆಯ ದಿನಾಂಕ ಮತ್ತು ಸಮಯ :** ಮತದಾನದ ದಿನದಂದು ಅಂದರೆ ದಿನಾಂಕ: 24.07.2022 ಮತದಾನದ ಅವಧಿ ಮುಕ್ತಾಯವಾದ ತಕ್ಷಣ. |
| (ಜೆ) | ರಿಟರ್ನಿಂಗ್ ಅಧಿಕಾರಿಯಿಂದ ಫಲಿತಾಂಶ ಘೋಷಣೆ | ಮತದಾನದ ದಿನದಂದು ಮತ ಎಣಿಕೆ ಮುಕ್ತಾಯವಾದ ತಕ್ಷಣ |

(a) ಚುನಾಣೆಯಲ್ಲಿ ಭರ್ತಿ ಮಾಡಬೇಕಾಗಿರುವ ಸ್ಥಾನಗಳ ಸಂಖ್ಯೆ: 21
[ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ಕಲಂ.54(2) ರಂತೆ]

(b) ನಿರ್ದೇಶಕರನ್ನು ಚುನಾಯಿಸಬೇಕಾದ ಮತಕ್ಷೇತ್ರ (ಉಪವಿಧಿ ಸಂಖ್ಯೆ 21ರಲ್ಲಿ ನಿರ್ದಿಷ್ಟಪಡಿಸಿದಂತೆ):

| ಮತಕ್ಷೇತ್ರದ ಹೆಸರು | ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆ |
|---|---|
| ಬೆಂಗಳೂರು ಪ್ರಾಂತ (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಶಿವಮೊಗ್ಗ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳು) | 6 |
| ಮೈಸೂರು ಪ್ರಾಂತ (ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಗಳು) | 2 |
| ಬೆಳಗಾವಿ ಪ್ರಾಂತ (ಬೆಳಗಾವಿ, ವಿಜಯಪುರ, ಬಾಗಲಕೋಟೆ, ಧಾರವಾಡ, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಗಳು) | 7 |
| ಕಲಬುರಗಿ ಪ್ರಾಂತ (ಕಲಬುರಗಿ, ಬೀದರ್, ಯಾದಗಿರಿ, ಬಳ್ಳಾರಿ, ವಿಜಯನಗರ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು) | 6 |

ಯಾವುದೇ ಜಿಲ್ಲೆಯಿಂದ ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಆಯ್ಕೆಯಾಗಲು ಅವಕಾಶ ಇರುವುದಿಲ್ಲ. ಹಾಗೂ ಯಾವುದೇ ಪ್ರಾಂತದಿಂದ ಮೂರನೇ ಒಂದರಷ್ಟಕ್ಕಿಂತ ಹೆಚ್ಚಿನ ನಿರ್ದೇಶಕರು ಆಯ್ಕೆಯಾಗುವಂತಿಲ್ಲ. (ಸಂಯುಕ್ತ ಸಹಕಾರಿ ಉಪವಿಧಿ ಸಂಖ್ಯೆ 21(2))

(c) ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಧಿನಿಯಮ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳು:

**ನಿರ್ದೇಶಕರ ಅರ್ಹತೆಗಳು:**

1) ಕಾಯ್ದೆ ಕಲಂ 55 ರನ್ವಯ ಅನರ್ಹತೆ ಹೊಂದಿರದ ಸದಸ್ಯರು ನಿರ್ದೇಶಕರಾಗಲು ಅರ್ಹರು.

2) ಸಂಯುಕ್ತ ಸಹಕಾರಿಗೆ ಯಾವುದೇ ರೀತಿಯಿಂದ ಬಾಕಿ ಇರದ ಸದಸ್ಯ ಸಹಕಾರಿಯನ್ನು ಪ್ರತಿನಿಧಿಸುವ ಡೆಲಿಗೇಟನು ನಿರ್ದೇಶಕರಾಗುವ ಅರ್ಹತೆ ಪಡೆದಿರುತ್ತಾನೆ. (ಸಂಯುಕ್ತ ಸಹಕಾರಿ ಉಪವಿಧಿ ಸಂಖ್ಯೆ 25(2))

(d) ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಧಿನಿಯಮ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅನರ್ಹತೆಗಳು.

ಒಬ್ಬ ವ್ಯಕ್ತಿಯು,–

(i) ಯಾವುದೇ ಸಮಯದಲ್ಲಿ ಸದಸ್ಯನಾಗಿ ಮತದಾನ ಮಾಡುವ ಅಥವಾ ಸದಸ್ಯನಾಗಿ ಮುಂದುವರಿಯುವ ಹಕ್ಕು ಕಳೆದುಕೊಂಡಿದ್ದರೆ; ಅಥವಾ

(ii) ಚುನಾವಣೆಯ ನಿಕಟಪೂರ್ವದ ಕನಿಷ್ಠ ಎರಡು ವರ್ಷಗಳ ಅವಧಿಯವರೆಗೆ ಸಂಯುಕ್ತ ಸಹಕಾರಿಯ ಮತದಾರ ಸದಸ್ಯನಾಗಿರದಿದ್ದರೆ; ಅಥವಾ

(iii) ಸಂಯುಕ್ತ ಸಹಕಾರಿಯ ಉಪವಿಧಿಗಳಲ್ಲಿ (ಉಪವಿಧಿ ಸಂಖ್ಯೆ 26) ನಿರ್ದಿಷ್ಟಪಡಿಸಲಾದ ಯಾವುದೇ ಅನರ್ಹತೆಯನ್ನು ಹೊಂದಿದ್ದರೆ; ಅಥವಾ

(iv) ಮಂಡಲಿಯ ಅಥವಾ ಸಾಮಾನ್ಯ ಸಭೆಯ ಮೂರು ನಿರಂತರ ಸಭೆಗಳಿಗೆ ಅನಧಿಕೃತವಾಗಿ ಗೈರುಹಾಜರಾದರೆ; ಅಥವಾ

(v) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೈತಿಕ ಅಧ:ಪತನವನ್ನೊಳಗೊಳ್ಳುವ ಯಾವುದೇ ಅಪರಾಧಕ್ಕಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಅಪರಾಧಕ್ಕಾಗಿ ನಿರ್ಣಿತ ಅಪರಾಧಿಯಾಗಿದ್ದರೆ. ಅಥವಾ

(vi) ನಿರ್ದೇಶಕನು ತಾನು ಪ್ರತಿನಿಧಿಸುವ ಸಹಕಾರಿಯ ಮಂಡಲಿಯ ಸದಸ್ಯತ್ವ ನಿಂತುಹೋದಲ್ಲಿ;

–ಸಂಯುಕ್ತ ಸಹಕಾರಿಯ ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರಿಯಲು ಅನರ್ಹನಾಗಿರುತ್ತಾನೆ.

(e) ಪ್ರತಿ ಸಹಕಾರಿಯ ಡೆಲಿಗೇಟನು ಆ ಪ್ರಾಂತದಿಂದ ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆಯಷ್ಟು ಮತಗಳನ್ನು ಮಾತ್ರ ಹೊಂದಿರತಕ್ಕದ್ದು. ಪ್ರತಿ ಪ್ರಾಂತದಿಂದ ಚುನಾವಣೆಯಲ್ಲಿ ಅತಿ ಹೆಚ್ಚು ಮತವನ್ನು ಪಡೆದ ಉಮೇದುವಾರರಲ್ಲಿ ಕಂಡಿಕೆ ಬಿ ನಲ್ಲಿ ತಿಳಿಸಿದಂತೆ ಆ ಪ್ರಾಂತದಿಂದ ಆಯ್ಕೆಯಾಗಬೇಕಾದ ನಿರ್ದೇಶಕರ ಸಂಖ್ಯೆಯಷ್ಟು ಉಮೇದುವಾರರು ಚುನಾಯಿತರಾಗತಕ್ಕದ್ದು. ಯಾವುದೇ ಜಿಲ್ಲೆಯಿಂದ ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಆಯ್ಕೆಯಾಗಲು ಅವಕಾಶ ಇರುವುದಿಲ್ಲ.

(f) ಚುನಾವಣೆಯಲ್ಲಿ ಸ್ಪರ್ಧಿಸಬಯಸುವವರು, ತಮ್ಮ ನಾಮಪತ್ರವನ್ನು ನಮೂನೆ 2ಬಿ ಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಸಂಯುಕ್ತ ಸಹಕಾರಿಯ ಕಛೇರಿಯಲ್ಲಿ ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 03.00 ಗಂಟೆಯೊಳಗೆ ರಿಟರ್ನಿಂಗ್ ಅಧಿಕಾರಿಗೆ/ಸಹಾಯಕ ರಿಟರ್ನಿಂಗ್ ಅಧಿಕಾರಿಗೆ ತಾನು ಪ್ರತಿನಿಧಿಸುವ ಸಹಕಾರಿಯ ಆಡಳಿತ ಮಂಡಲಿ ನಿರ್ಣಯ ಹಾಗೂ ಚುನಾವಣಾ ಠೇವಣಿ ಸಲ್ಲಿಸಿದ ರಸೀದಿಯೊಂದಿಗೆ ಖುದ್ದಾಗಿ ಸಲ್ಲಿಸತಕ್ಕದ್ದು.

(g) ಸೌಹಾರ್ದ ಸಹಕಾರಿ ನಿಯಮ ಸಂಖ್ಯೆ 5ಎಫ್(3)(ii) ರಂತೆ ಚುನಾವಣಾ ಠೇವಣಿ ರೂ.5,000/–ಗಳನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., (Karnataka State Souharda Federal

Cooperative Ltd.) ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪೇ ಆರ್ಡರ್ ಅಥವಾ ಡಿಮಾಂಡ್ ಡ್ರಾಫ್ಟ್ ಮೂಲಕ ಅಥವಾ ನಗದಾಗಿ ಪಾವತಿಸಿ ರಸೀದಿ ಪಡೆಯತಕ್ಕದ್ದು. ಪರಂತು; ಅಭ್ಯರ್ಥಿಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಲ್ಲಿ ಅಥವಾ ಮಹಿಳೆಯಾಗಿದ್ದಲ್ಲಿ ಪಾವತಿಸಬೇಕಾದ ಚುನಾವಣಾ ಠೇವಣಿಯ ಶೇ.50ರಷ್ಟು ಅಂದರೆ ರೂ.2,500/– ಆಗಿರುತ್ತದೆ.

(h) ಮತ ಚಲಾಯಿಸಲು ಸಹಕಾರ ಚುನಾವಣಾ ಪ್ರಾಧಿಕಾರವು ವಿತರಿಸಿದ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ.

(i) ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣೆ ಮುಗಿಯುವವರೆಗೆ ಸಾರ್ವಜನಿಕ ರಜಾ ದಿನಗಳಂದೂ ಸಹ ಸಂಯುಕ್ತ ಸಹಕಾರಿಯ ಕಛೇರಿ ಬೆಳಿಗ್ಗೆ 10.00 ರಿಂದ ಸಂಜೆ 03.00 ರವರೆಗೆ ಕಾರ್ಯನಿರ್ವಹಿಸುತ್ತದೆ.

(ಹೆಚ್. ವೆಂಕಟೇಶ್, ಕ.ಆ.ಸೇ)

ಸ್ಥಳ: ಬೆಂಗಳೂರು

ದಿನಾಂಕ: 08.07.2022

ಆಯುಕ್ತರು, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ
ಹಾಗೂ ರಿಟರ್ನಿಂಗ್ ಅಧಿಕಾರಿ, ಕರಾಸೌಸಂಸನಿ, ಬೆಂಗಳೂರು